# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ವೃಷಭಾವತಿನಗರ ವಾರ್ಡ್–102,
3ನೇ ಮುಖ್ಯರಸ್ತೆ, ಬಿ.ಇ.ಎಮ್.ಎಲ್. ಲೇಔಟ್, ಬೆಂಗಳೂರು–79.

ಸಂಖ್ಯೆ: ವಾ–102/ವಾ.ಸ./ಸಭಾನಡವಳಿ–01/2021–22 ದಿನಾಂಕ: 03/04/2021

## –:ಸಭೆಯ ನಡವಳಿಗಳು:–

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 03/04/2021 ಶನಿವಾರದಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್–102 ವೃಷಭಾವತಿನಗರದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ.ಜಿ.ಪ್ರಕಾಶ್ ಸಮಿತಿಯ ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್–19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:–**

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ |
|---|---|
| 1 | ಶ್ರೀ ಕೆ.ವಿಜಯ್ ಶೇಖರ್, ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ, ವಾರ್ಡ್–102 |
| 2 | ಶ್ರೀ ಜಿ.ಪ್ರಕಾಶ್, ಕಾರ್ಯದರ್ಶಿ ವಾರ್ಡ್ ಸಮಿತಿ ಮತ್ತು ಸಹಾಯಕ ಅಭಿಯಂತರರು, ವಾರ್ಡ್–102. |
| 3 | ಶ್ರೀ ಜಿ.ಆರ್.ಗೋವಿಂದ ರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–102 |
| 4 | ಶ್ರೀ ಕೆ.ವಿ. ಲೋಕೇಶ್, ಹಿರಿಯ ವೆಟರಿನರಿ ಪರಿವೀಕ್ಷಕರು, ಬಿಬಿಎಂಪಿ. |
| 5 | ಶ್ರೀ ಬಿ.ಆರ್. ಮಂಜುನಾಥ್, ಟ್ಯಾಕ್ಸ್ ಇನ್ಸ್‌ಪೆಕ್ಟರ್, ವಾರ್ಡ್–102 |
| 6 | ಶ್ರೀ ಎಸ್.ಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು, (ಗುತ್ತಿಗೆ) ವಾರ್ಡ್–102 |
| 7 | ಶ್ರೀ ಸಿದ್ದರಾಜು, ಸಹಾಯಕ ಅಭಿಯಂತರರು, ಬೆಸ್ಕಾಂ. |
| 8 | ಶ್ರೀ ಶೇಖರ್ ನಾಯಕ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ. |
| 9 | ಶ್ರೀ ವಿನೋದ್, ವಾರ್ಡ್ ಮಾರ್ಷಲ್, ಬಿಬಿಎಂಪಿ. |
| 10 | ಶ್ರೀ ಹೆಚ್.ಕೆ.ರುದ್ರಪ್ಪ, ಎ.ಎಸ್.ಐ. ಬಸವೇಶ್ವರನಗರ ಪೊಲೀಸ್ ಠಾಣೆ |
| 11 | ಶ್ರೀ ರಾಘವೇಂದ್ರ ಕೆ. ಬಿ.ಡಬ್ಲ್ಯೂಎಸ್.ಎಸ್.ಬಿ. ಗುತ್ತಿಗೆದಾರರು. |
| 12 | ಶ್ರೀಮತಿ ಬೈಲಮ್ಮ, ಆಶಾ ಕಾರ್ಯಕರ್ತೆ, ವಾರ್ಡ್–102. |
| 13 | ಶ್ರೀಮತಿ ವಿದ್ಯಾರಾಣಿ, ಆಶಾ ಕಾರ್ಯಕರ್ತೆ, ವಾರ್ಡ್–102. |
| 14 | ಶ್ರೀ ಚಂದ್ರಪ್ಪ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 15 | ಶ್ರೀ ರಾಜ್ ಕುಮಾರ್, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 16 | ಶ್ರೀಮತಿ ಪ್ರೇಮ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 17 | ಶ್ರೀ ಹೇಮಂತ್ ಕುಮಾರ್, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |

ಮು.ತಿ.ನೋ.

Scanned with CamScanner

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾಹಿತಿಗಳ ವಿವರಣೆ ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

➢ ಶ್ರೀ ಗೋವಿಂದರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಇಲ್ಲಿಯವರೆವಿಗೆ ಒಟ್ಟು 31 ಕೋವಿಡ್ ಸೋಂಕಿತರು ಪತ್ತೆಯಾಗಿದ್ದು, ಅದರಲ್ಲಿ 6 ಜನ ಸೋಂಕಿತರನ್ನು ಹಾಸ್ಪಿಟಲೈಜೇಷನ್ ಹಾಗೂ ಉಳಿದ 25 ಜನ ಸೋಂಕಿತರನ್ನು ಹೋಮ್ ಐಸೋಲೇಷನ್‌ನಲ್ಲಿ ಇರಿಸಲಾಗಿದೆ. ಎಂದು ಸಭೆಯಲ್ಲಿ ತಿಳಿಸಿದರು.

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಕೋವಿಡ್-19 ಸಾಂಕ್ರಾಮಿಕ ರೋಗದ ಎರಡನೇ ಅಲೆ ಪ್ರಾರಂಭದ ಹಾದಿಯಲ್ಲಿದ್ದು, ಈ ರೋಗವನ್ನು ತಡೆಗಟ್ಟಲು ತ್ವರಿತವಾಗಿ ಆರೋಗ್ಯ ವಿಭಾಗದ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

➢ ಶ್ರೀ ಗೋವಿಂದರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಕೋವಿಡ್-19ಗೆ ಸಂಭಂಧಿಸಿದಂತೆ ಮಾನ್ಯ ಕರ್ನಾಟಕ ಸರ್ಕಾರದ ಹೊಸ ಸುತ್ತೋಲೆಯಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಹಾಗೂ ಆಶಾ ಕಾರ್ಯಕರ್ತೆಯರು ಸೋಂಕಿತರೊಂದಿಗೆ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರನ್ನು ಹೆಚ್ಚಾಗಿ ಕಂಡುಹಿಡಿದು ಕೋವಿಡ್ ಸೋಂಕು ಪರೀಕ್ಷೆಗಳನ್ನು ಕೈಗೊಳ್ಳುವಂತೆ ಸೂಕ್ತ ಕ್ರಮ ವಹಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಹೆಚ್ಚಾಗಿ ಜನ ಸೇರುವಂತಹ ಸ್ಥಳಗಳಾದ, ಸಿನಿಮಾ ಥಿಯೇಟರ್, ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಕಲ್ಯಾಣ ಮಂಟಪ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕೆಂದು ಅರಿವು ಮೂಡಿಸಬೇಕೆಂದು ಮಾರ್ಷಲ್‌ಗಳಿಗೆ ಸೂಚಿಸಿದರು.

➢ ವಾರ್ಡ್ ಮಾರ್ಷಲ್ ರವರು ಮಾತನಾಡುತ್ತಾ, ಈಗಾಗಲೇ ಕಲ್ಯಾಣ ಮಂಟಪಗಳಿಗೆ ಹಾಗೂ ಇತರೆ ಜನ ಸಂದಣಿ ಹೆಚ್ಚಾಗಿ ಕಂಡುಬರುವ ಸ್ಥಳಗಳಿಗೆ ಕೋವಿಡ್-19 ಸಾಂಕ್ರಾಮಿಕ ರೋಗದ ಮುನ್ನೆಚ್ಚರಿಕೆ ಕ್ರಮಗಳ ಪ್ರಕಟಣೆ ಹೊರಡಿಸಲಾಗಿದ್ದು, ಸಭೆ ಸಮಾರಂಭಗಳು ನಡೆಯುವ ಸ್ಥಳಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಲಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ಸಮಿತಿಯಲ್ಲಿ 45 ವರ್ಷ ಮೇಲ್ಪಟ್ಟ ಸದಸ್ಯರುಗಳು ತ್ವರಿತವಾಗಿ ವ್ಯಾಕ್ಸಿನೇಷನ್ ಮಾಡಿಕೊಳ್ಳಬೇಕಾಗಿ ಸಭೆಯಲ್ಲಿ ಸೂಚಿಸಿದರು.

2) **ಅಭಿಯಂತರರ ವಿಭಾಗದ ಬಗ್ಗೆ:-**

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಕಳೆದ ಸಭೆಯಲ್ಲಿ ವಾರ್ಡ್ ಸಮಿತಿ ಸಭೆಯ ಸದಸ್ಯರಾದ ಶ್ರೀ ರಾಜ್‌ಕುಮಾರ್ ಮತ್ತು ಶ್ರೀ ಚಂದ್ರಪ್ಪ ರವರು ತೋಟದ ರಸ್ತೆಯಲ್ಲಿ ಹಾಗೂ ಮಾರುತಿನಗರದ ವೀರಪ್ಪ ಮನೆಯ ಹತ್ತಿರ ರಸ್ತೆಯಲ್ಲಿ ಡೆಬ್ರಿಸ್ ಹಾಕಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಹಾಗೂ ಸುಗಮ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ದೂರಿರುತ್ತಾರೆ. ಸದರಿ ದೂರಿನನ್ವಯ ತೆಗೆದುಕೊಂಡಿರುವ ಕ್ರಮದ ಬಗ್ಗೆ ತಿಳಿಸುವಂತೆ ಹೇಳಿದರು.

➢ ಸಹಾಯಕ ಅಭಿಯಂತರರು ಮಾತನಾಡುತ್ತಾ, ಸದರಿ ಸ್ಥಳಗಳನ್ನು ಪರಶೀಲಿಸಲಾಗಿದ್ದು, ಈಗಾಗಲೇ ಡೆಬ್ರಿಸ್ ತೆರವುಗೊಳಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

➢ ವಾರ್ಡ್ ಸಮಿತಿ ಸಭೆಯ ಸದಸ್ಯರಾದ ಶ್ರೀಮತಿ ಪ್ರೇಮ ರವರು ಮಾತನಾಡುತ್ತಾ, ಗಂಗಣ್ಣ ಬಡಾವಣೆ 1ನೇ ಅಡ್ಡರಸ್ತೆ, ಶನಿಮಹಾತ್ಮ ದೇವಸ್ಥಾನದ ಬಳಿಯಲ್ಲಿ ನೀರಿನ ಸಮಸ್ಯೆಯಿದ್ದು, ಹೊಸದಾಗಿ ಬೋರ್‌ವೆಲ್ ಅಳವಡಿಸಿಕೊಡಬೇಕಾಗಿ ಸಭೆಯಲ್ಲಿ ಕೋರಿದರು.

➢ ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸ್ಥಳ ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಸಹಾಯಕ ಅಭಿಯಂತರರು ವಾರ್ಡ್-102 ರವರಿಗೆ ತಿಳಿಸಿರು.

ಪು.ತಿ.ನೋ.

Scanned with CamScanner

3) **ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕಸ ಬೀಳದಂತೆ ನೋಡಿಕೊಳ್ಳಲು ಹಾಗೂ ಸ್ವಚ್ಚತೆಯನ್ನು ಕಾಪಾಡಲು ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.
- ಶ್ರೀ ಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಶ್ರೀ ವಿನಾಯಕ ದೇವಸ್ಥಾನದ ಹತ್ತಿರ ಕಸವನ್ನು ಬಿಸಾಡುತ್ತಿರುವುದರಿಂದ ಸದರಿಯವರಿಗೆ ಎಚ್ಚರಿಕೆ ನೀಡಿ ದಂಡ ವಿಧಿಸಲಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು.
- ವಾರ್ಡ್ ಸಮಿತಿ ಸಭೆಯ ಸದಸ್ಯರಾದ ಶ್ರೀ ಚಂದ್ರಪ್ಪರವರು ಮಾತನಾಡುತ್ತಾ, 4ನೇ ಸಿ ಅಡ್ಡರಸ್ತೆ ಮಾರುತಿನಗರದಲ್ಲಿ ಗಾರ್ಮೆಂಟ್ಸ್ ಬಟ್ಟೆ ಮತ್ತು ಹೂವುಗಳನ್ನು ರಸ್ತೆಯಲ್ಲಿ ಬಿಸಾಡುತ್ತಿದ್ದಾರೆಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ,
  - ಎರಡನೇ ಸುತ್ತಿನಲ್ಲಿ ಕಸ ಹೆಚ್ಚಾಗಿ ಬೀಳುವ ಜಾಗಗಳಲ್ಲಿ ಕಸವನ್ನು ತೆರವುಗೊಳಿಸುವುದು.
  - ಬ್ಲಾಕ್ ಸ್ಪಾಟ್‌ಗಳಲ್ಲಿ ಕಸ ಬೀಳದಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಸೂಕ್ತ ಕ್ರಮವಹಿಸುವುದು.
  - ಕಸವನ್ನು ವಿಲೇವಾರಿ ವಿಭಾಗದ ಗುತ್ತಿಗೆದಾರರಾದ ಸುರೇಶ್ ಮತ್ತು ಅವರ ಮೇಲ್ವಿಚಾರಕರು ಮುಂದಿನ ಸಭೆಗೆ ತಪ್ಪದೆ ಹಾಜರಾಗಬೇಕೆಂದು ಎಂದು ಸಭೆಯಲ್ಲಿ ತಿಳಿಸಿದರು.

4) **ಕಂದಾಯ ವಿಭಾಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿ ರವರು ಮಾತನಾಡುತ್ತಾ, ಚುನಾವಣಾ ಕಾರ್ಯಗಳಿಗೆ ಸಂಬಂಧಿಸಿದಂತೆ ಜನಗಣತಿ ಸರ್ವೆ ಮಾಡುವುದು ಹಾಗೂ ಇನ್ನಿತರೆ ಚುನಾವಣಾ ಕಾರ್ಯಗಳಿಗೆ ಸಂಬಂಧಿಸಿದಂತೆ ತೊಡಗಿಸಿಕೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ ಬಿ.ಆರ್.ಮಂಜುನಾಥ್, ಟ್ಯಾಕ್ಸ್ ಇನ್ಸ್‌ಪೆಕ್ಟರ್ ರವರಿಗೆ ಸಭೆಯಲ್ಲಿ ತಿಳಿಸಿದರು.
- ಶ್ರೀ ಬಿ.ಆರ್.ಮಂಜುನಾಥ್ ರವರು ಮಾತನಾಡುತ್ತಾ, ಸದರಿ ವಿಷಯವಾಗಿ ಸೂಕ್ತ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

5) **ಪಶುಪಾಲನಾ ವಿಭಾಗದ ಬಗ್ಗೆ:-**

- ವಾರ್ಡ್ ಸಮಿತಿ ಸಭೆಯ ಎಲ್ಲಾ ಸದಸ್ಯರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಅವುಗಳನ್ನು ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸಭೆಯಲ್ಲಿ ಕೋರಿದರು.
- ಹಿರಿಯ ವೆಟರಿನರಿ ಪರಿವೀಕ್ಷಕರಾದ ಶ್ರೀ ಕೆ.ವಿ. ಲೋಕೇಶ್ ರವರು ಮಾತನಾಡುತ್ತಾ, ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿನ ಗಂಗಣ್ಣ ಬಡಾವಣೆಯಲ್ಲಿ ಬೀದಿ ನಾಯಿಗಳನ್ನು ಹಿಡಿದು ಅವುಗಳಿಗೆ ವ್ಯಾಕ್ಸಿನ್ ಹಾಗೂ ಆಪರೇಷನ್ ಮಾಡಿ ಸದರಿ ಸ್ಥಳಗಳಿಗೆ ಹಿಂತಿರುಗಿಸುವ ಕಾರ್ಯವನ್ನು ಮಾಡಲಾಗಿರುವುದಾಗಿ, ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಂಡ ಕಾರ್ಯಾಚರಣೆಯ ಬಗ್ಗೆ ಆಗಾಗ್ಗೆ ವಾಟ್ಸ್‌ಆಪ್‌ನಲ್ಲಿ ವರದಿ ಮಾಡಲಾಗುತ್ತಿರುವುದಾಗಿ ಸಭೆಗೆ ತಿಳಿಸಿದರು.

6) **ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:-**

- ಸಹಾಯಕ ಅಭಿಯಂತರರು ವಾರ್ಡ್-102 ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಯ ಮಟ್ಟಕ್ಕೆ ಏರಿಸಲಾದ ಮ್ಯಾನ್‌ಹೋಲ್‌ಗಳಿಂದ ತೆಗೆದಿರುವ ಹೂಳುಗಳನ್ನು ಹಾಗೂ ಕಾಮಗಾರಿಯ ಡೆಬ್ರಿಸ್‌ಗಳನ್ನು ಶೀಘ್ರವಾಗಿ ತೆರವುಗೊಳಿಸುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಶೇಖರ್ ನಾಯಕ್, ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್‌ಬಿ ರವರಿಗೆ ತಿಳಿಸಿದರು.
- ವಾರ್ಡ್ ಸಮಿತಿ ಸಭೆಯ ಸದಸ್ಯರಾದ ಶ್ರೀ ಚಂದ್ರಪ್ಪ ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿನ ಮಾರುತಿನಗರದ 4ನೇ ಐ, ಜಿ, ಎಫ್ ಅಡ್ಡರಸ್ತೆಗಳಲ್ಲಿ ಕುಡಿಯುವ ನೀರಿನ ಅಭಾವವಿದ್ದು, ಇದನ್ನು ಸರಿಪಡಿಸಲು ಹಾಗೂ ಸದರಿ ರಸ್ತೆಗಳಲ್ಲಿರುವ ಹಾಲಿ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು.

Scanned with CamScanner

7) <u>ಬೆಸ್ಕಾಂ ವಿಭಾಗದ ಬಗ್ಗೆ:-</u>

- ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ಕಳೆದ ಸಭೆಗಳಲ್ಲಿ ಚರ್ಚಿಸಿದಂತೆ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಬೆಸ್ಕಾಂ ವತಿಯಿಂದ ಯು.ಜಿ. ಕೇಬಲ್ ಅಳವಡಿಸುವ ಕಾಮಗಾರಿಯು ವಿಳಂಬವಾಗಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತುಂಬಾ ಅನಾನುಕೂಲವಾಗಿರುತ್ತದೆ. ಆದುದರಿಂದ ತಮ್ಮ ವತಿಯಿಂದ ಯು.ಜಿ. ಕೇಬಲ್ ಅಳವಡಿಸುವ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಶ್ರೀ ಸಿದ್ದರಾಜು ಸಹಾಯಕ ಅಭಿಯಂತರರು ಬೆಸ್ಕಾಂ ರವರಿಗೆ ಸಭೆಯಲ್ಲಿ ತಿಳಿಸಿದರು.
- ಶ್ರೀ ಸಿದ್ದರಾಜು ಸಹಾಯಕ ಅಭಿಯಂತರರು ರವರು ಮಾತನಾಡುತ್ತಾ, ಯು.ಜಿ. ಕೇಬಲ್ ಅಳವಡಿಸುವ ಗುತ್ತಿಗೆದಾರರಿಗೆ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ **ವಾರ್ಡ್ ಕಮಿಟಿ ವಾರ್ಡ್-102 ವಾಟ್ಸ್ ಆಪ್ ಗ್ರೂಪ್** ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ನೋಡಲ್ ಅಧಿಕಾರಿಯವರು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ-102

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್-102

<u>ಪ್ರತಿಯನ್ನು :-</u>

1) ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2) ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3) ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4) ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5) ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6) ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7) ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರವರಿಗೆ ಸಲ್ಲಿಸಿದೆ.
8) ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9) ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10) ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11) ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮಕೈಗೊಳ್ಳಲು ಸಲ್ಲಿಸಿದೆ.
12) ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13) ಸಹಾಯಕ ಕಾರ್ಯಪಾಲಕ ಅಭಿಯಂತರರು (ಪಟಗರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14) ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15) ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16) ಕಛೇರಿಯ ಕಡತಕ್ಕೆ

Scanned with CamScanner

ವಾರ್ಡ್-ಸಂಖ್ಯೆ-102 ವೃಷಭಾವತಿನಗರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

03/04/2021 ರಂದು ಬೆಳಿಗ್ಗೆ 10.00 ಗಂಟೆಗೆ.

ವಾರ್ಡ್ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗೂ RWA's ಸದಸ್ಯರುಗಳ ಹಾಜರಾತಿ ತೆಗೆದುಕೊಳ್ಳಲಾಗಿರುತ್ತದೆ.

| ಕ್ರಮ ಸಂಖ್ಯೆ | ಹೆಸರು | ಪದನಾಮ ಇಲಾಖೆ | ಮೊಬೈಲ್ ಸಂಖ್ಯೆ | ಸಹಿ |
|---|---|---|---|---|
| 1) | ಅಜಯಕುಮಾರ್. k. | ಸೋಷಿಯಲ್ ಅಧಿಕಾರಿ RO | 9448670084 | |
| 2) | ಪ್ರಕಾಶ್. ಜಿ. | ಕಾರ್ಯದರ್ಶಿ W-102 | 9845236847 | [signature] 3/4/2021 |
| 3) | ಗೋವಿಂದರಾಜು | SHI | 9845512187 | |
| 4) | ಜಿ.ಆರ್. ಮಂಜುನಾಥ್ | T.I | 9743557879 | G.R. [signature] |
| 5) | ಚಿಕ್ಕರಾಜು | AE, Bescom | 9449870177 | B.R. [signature] 03-04-21 |
| 6) | ಗೌತಮ್ | Marshal | 8095012271 | [signature] |
| 7) | ಬಾಬು | JHI, W-102 | 9632549664 | |
| 8) | ಕೆ.ಬಿ. ರವೀಶ್ ಕುಮಾರ್ ನಾಯಕ್ | BWSSB | 994542108 | S. Babu |
| 9) | K. V. ಶೇಖರ್ | Veterinary | 9480683056 | [signature] AE |
| 10) | ರಂಗನಾಥ್ | AEE Nagapura | 9480685316 | |
| 11) | ಶಿಲ್ಪ. ಟಿ | ಅಧ್ಯಕ್ಷರು | 8095353731 | |
| 12) | ಚಂದ್ರಪ್ಪ | ಸದಸ್ಯರು | 9845763281 | |
| 13) | ದೇವರಾಜು | —॥— | | [signature] |
| 14) | ರಂಗನಾಥ್.C | —॥— | 9341199998 | |
| 15) | ಚಿಕ್ಕಗಂಗಮ್ಮ 2 | —॥— | 990239918 | |
| 16) | ಪ್ರೇಮ | —॥— | 9632728915 | Prema |

Scanned with CamScanner

| | | | | |
|---|---|---|---|---|
| 17) | ಗಿರೀಶ | [illegible] | | |
| 18) | ಹೇಮಂತ್ ಕುಮಾರ್ | —॥— | 9448362208 | |
| 19) | ರಾಜ್ ಕುಮಾರ್ | —॥— | 8553779344 | RJ |
| 20) | ಆನಂದ್. ಆರ್ | —॥— | 9741912644 | |
| 21) | ಗೋವಿಂದಪ್ಪ | Street light | 9740378835 | |
| 22) | Raghavendra. K. | BWSSB | 9986449988 | [signature] |
| 23) | Bylamma | Link worker | 8970173422 | [mark] |
| 24) | Vidyaarani BS | Link worker | 8861637552 | Vidya |
| 25) | ವಿನೋದ್ | MARSHAL 102 | 9663084662 | Vinod |

Scanned with CamScanner